## ಇಲ್ಲಿ ಭಕ್ತರ ಕಾಣಿಕೆ, ಬಡ ರೋಗಿಗಳಿಗೆ

ಉಡುಪಿಯ ಕಿದಿಯೂರ್ ಹೋಟೆಲಿನ ಆವರಣದಲ್ಲಿ ಪುರಾತನ ಶ್ರೀನಾಗ ದೇವರ ಗುಡಿ ಇದೆ. ಕರಾವಳಿ ಭಾಗದಲ್ಲಿ ನಾಗರಾಧನೆ ಪ್ರಾಮುಖ್ಯತೆ ಪಡೆದಿವುದರಿಂದ ನಿತ್ಯವು ಇಲ್ಲಿಗೆ ಭಕ್ತರು ನೂರಾರು ಸಂಖ್ಯೆಯಲ್ಲಿ ಬಂದು ಹೋಗುತ್ತಾರೆ. ಇಲ್ಲಿಗೆ ಬರುವ ಭಕ್ತರು ಹುಂಡಿಗೆ ಕಾಣಿಕೆ ಹಾಕಲು ಹೋದಾಗ, ಕಾಣಿಕೆ ಡಬ್ಬಿಯ ಮೇಲೆ ಬರೆದಿರುವ ಬರಹವೊಂದು ಗಮನ ಸೆಳೆಯಿತು.

ಭಕ್ತರ ಕಾಣಿಕೆಯನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ಬಡರೋಗಿಗಳಿಗೆ ವಿತರಿಸಲಾಗುತ್ತದೆ ಎಂಬ ಮಾಹಿತಿ ಆ ಬರಹದಲ್ಲಿತ್ತು. ಸಾಮಾನ್ಯವಾಗಿ ಎಲ್ಲಾ ದೇವಾಲಯಗಳಲ್ಲಿ ಭಕ್ತರಿಂದ ಬರುವ ಕಾಣಿಕೆ ಹಣವನ್ನು ದೇವಸ್ಥಾನದ ಖರ್ಚು ವೆಚ್ಚಗಳನ್ನು ಭರಿಸಲು ಬಳಸಲಾಗುತ್ತದೆ. ಈ ನಾಗಸನ್ನಿಧಿಯ ಆಡಳಿತ ಮಂಡಳಿಯು ಭಕ್ತರ ಕಾಣಿಕೆಯನ್ನು ಬಡರೋಗಿಗಳಿಗೆ ವಿತರಿಸುವ ಸಮಾಜಮುಖಿ ಯೋಜನೆ ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆಗೆ ಪಾತ್ರವಾಗಿದೆ.

—ತಾರಾನಾಥ್ ಮೇಸ್ತ ಶಿರೂರು, ಉಡುಪಿ






## ಮಧುಕೇಶ್ವರ ದೇಗುಲದ ನಂದಿ ವಿಗ್ರಹ

ಸಾಮಾನ್ಯವಾಗಿ ಶಿವನ ದೇಗುಲಗಳಲ್ಲಿ ನಂದಿ ವಿಗ್ರಹವನ್ನು ಕಾಣುತ್ತೇವೆ. ಆದರೆ, ಈ ಚಿತ್ರದಲ್ಲಿ ಇರುವ ನಂದಿ ಮಾತ್ರ ವಿಶೇಷ. ಇದು ಇರುವುದು ಉತ್ತರಕನ್ನಡ ಜಿಲ್ಲೆಯ ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿ. ಇದು ಏಕ ಶಿಲೆಯ ಸುಂದರ ಕೆತ್ತನೆಯಲ್ಲಿ ಮೂಡಿದ ನಂದಿ. ಶಿವ ಹಾಗೂ ಪಾರ್ವತಿ ಇಬ್ಬರನ್ನು ಏಕ ಕಾಲದಲ್ಲಿ ನೋಡುವಂತಹ ಸ್ಥಾನದಲ್ಲಿರಿಸಲಾಗಿದೆ. ಮಧುಕೇಶ್ವರ ಗರ್ಭಗೃಹದಿಂದ ನಂದಿಯ ಎಡಗಣ್ಣನ್ನು ಮತ್ತು ಪಾರ್ವತಿಯ ಗರ್ಭಗೃಹದಿಂದ ನಂದಿಯ ಬಲಗಣ್ಣನ್ನು ನೋಡಬಹುದು. ನಂದಿಯ ಕಣ್ಣುಗಳನ್ನು ನೋಡಿದಾಗ ಈ ಒಗಟು ನಿಮಗೆ ಅರ್ಥವಾಗುತ್ತದೆ.

—ಸಂಜ್ಞಾ ಪಿ. ಭಟ್ಟ, ಶಿರಸಿ

## ಏಷ್ಯಾದ ಅತಿದೊಡ್ಡ ಹೂವಿನ ರಥೋತ್ಸವ

ತುಮಕೂರು ಜಿಲ್ಲೆ ಸಿರಾ ತಾಲ್ಲೂಕಿನ ಮಾಗೋಡು ಗ್ರಾಮದ ಕಂಬದ ರಂಗನಾಥಸ್ವಾಮಿ ರಥೋತ್ಸವವು ವಿಶ್ವಖ್ಯಾತಿಯನ್ನು ಪಡೆದಿದ್ದು, ಜಾತ್ರಾ ದಿನದಂದು ದೇವಸ್ಥಾನದ ರಥೋತ್ಸವಕ್ಕೆ ಭಕ್ತರು ಅಪಾರ ಪ್ರಮಾಣದಲ್ಲಿ ಹೂ ತಂದು ಸಿಂಗರಿಸುತ್ತಾರೆ. ಭಕ್ತರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊರುತ್ತಾರೆ. ತಾವು ಅಂದುಕೊಂಡಿದ್ದ ಕೆಲಸ ಕೈಗೂಡಿದರೆ ಜಾತ್ರೆಗೆ ಬಂದು ರಥಕ್ಕೆ ಹೂ ಅರ್ಪಿಸುವುದರ ಮೂಲಕ ತಮ್ಮ ಹರಕೆ ತೀರಿಸಿಕೊಳ್ಳುತ್ತಾರೆ. ನಮ್ಮ ರಾಜ್ಯ ಮಾತ್ರವಲ್ಲದೇ ಅಕ್ಕಪಕ್ಕದ ರಾಜ್ಯಗಳಿಂದಲೂ ಆಗಮಿಸುವ ಲಕ್ಷಾಂತರ ಭಕ್ತರು ಅರ್ಪಿಸುವ ಹೂ ನೂರಾರು ಟನ್‌ಗಳಷ್ಟು ಭಾರವಿರುತ್ತದೆ. ಇಷ್ಟೊಂದು ಹೂವನ್ನು ಅಲಂಕರಿಸುವ ರಥ ಮತ್ತೊಂದಿಲ್ಲ ಎಂಬ ಮಾತೂ ಇದೆ.

—ಪ.ನಾ.ಹಳ್ಳಿ ಹರೀಶ್ ಕುಮಾರ್, ತುಮಕೂರು

